

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಾಹಿತ್ಯ ಸಮ್ಮೇಳನ ಮತ್ತು ಮದುವೆ ಮನೆ......

**ಚಿ**ತ್ರದುರ್ಗದಲ್ಲಿ ನಡೆಯಲಿರುವ ೭೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಅಮೃತಮಹೋತ್ಸವವಾಗಿದ್ದು ಕನ್ನಡಕ್ಕೆ ಈ ವರ್ಷ ದೊರೆತಿರುವ ಶಾಸ್ತ್ರೀಯ ಸ್ಥಾನಮಾನದ ಹಿನ್ನೆಲೆಯಲ್ಲಿ ಈ ಸಮ್ಮೇಳನಕ್ಕೆ ಒಂದು ವಿಶೇಷ ಮೆರಗು ಬಂದಿದೆ. ಐತಿಹಾಸಿಕ ಮಹತ್ವ ಪಡೆದಿರುವ ಚಿತ್ರದುರ್ಗ ನಗರವು ಕರ್ನಾಟಕದ ಹೃದಯ ಭಾಗದಲ್ಲಿದ್ದು ಇಲ್ಲಿ ನಡೆಯುವ ಸಮ್ಮೇಳನಕ್ಕೆ ಹಿಂದೆ ನಡೆದ ಸಮ್ಮೇಳನಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳು ಬರುವ ನಿರೀಕ್ಷೆ ಇದೆ. ಸಮ್ಮೇಳನವನ್ನು ಚಿತ್ರದುರ್ಗದಲ್ಲಿ ನಡೆಸಬೇಕೆಂದು ಒಂದು ವರ್ಷದ ಹಿಂದೆಯೇ ತೀರ್ಮಾನವಾಗಿದ್ದರೂ ಅದರ ಪೂರ್ವಭಾವಿ ಸಿದ್ಧತೆಗಳು ಮೊನ್ನೆ ಮೊನ್ನೆವರೆಗೂ ವಿಧಿವತ್ತಾಗಿ ಆರಂಭವಾಗಿರಲಿಲ್ಲ. ಅದಕ್ಕೆ ಜಿಲ್ಲಾ ಸಮಿತಿಯು ಕೊಡುವ ಕಾರಣ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಚುನಾವಣೆ, ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳ ಪುನಾರಚನೆ. ಇವೆಲ್ಲಾ ಸೆಪ್ಟೆಂಬರ್ ಮಧ್ಯದೊಳಗೆ ಮುಗಿದಿದ್ದು ಅಲ್ಲಿಂದ ನವಂಬರ್ ಮಧ್ಯಭಾಗದವರೆಗೆ ಎರಡು ತಿಂಗಳ ಅವಧಿಯಲ್ಲಿ ಜಿಲ್ಲಾಸಮಿತಿಯು ನಾಲ್ಕಾರು ಸಭೆಗಳನ್ನು ನಡೆಸಿದ್ದರೂ ಸ್ವಾಗತಸಮಿತಿಯ ರಚನೆಯೊಂದನ್ನು ಬಿಟ್ಟರೆ ಬೇರಾವ ಸಿದ್ಧತೆಗಳೂ ಆಗಿರಲಿಲ್ಲ. ಜಿಲ್ಲೆಯ ಯಾವ ರಾಜಕೀಯ ಮುಖಂಡರೂ ಸಕ್ರಿಯವಾಗಿ ಪಾಲ್ಗೊಂಡಿಲ್ಲವೆಂಬ ಕೂಗು ಸಾರ್ವತ್ರಿಕವಾಗಿ ಕೇಳಿಬರುತ್ತಿತ್ತು. ಹೀಗಾಗಿ ಚಿತ್ರದುರ್ಗದಲ್ಲಿ ಸಾಹಿತ್ಯಸಮ್ಮೇಳನ ನಡೆಯುವುದೋ ಇಲ್ಲವೋ ಎಂಬ ಸಂಶಯವು ಸಾಹಿತ್ಯಾಭಿಮಾನಿಗಳನ್ನು ಕಾಡಿತ್ತು. ಆದರೆ ಜಿಲ್ಲೆಯ ಮೂವರೂ ಮಂತ್ರಿಗಳನ್ನು ಮತ್ತು ಎಲ್ಲ ರಾಜಕೀಯ ಧುರೀಣರನ್ನು ವೈಯಕ್ತಿಕವಾಗಿ ನಾವು ಸಂಪರ್ಕಿಸಿದಾಗ ಜಿಲ್ಲಾಸಮಿತಿಯವರು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೆಂಬ ವಿಷಯ ತಿಳಿದುಬಂತು. ಈ ಹಿನ್ನೆಲೆಯಲ್ಲಿ ಅವರೆಲ್ಲರೊಂದಿಗೆ ಖಾಸಗಿಯಾಗಿ ಮಾತನಾಡಿ ಮನವೊಲಿಸಿ ನವಂಬರ್ ತಿಂಗಳ ಕೊನೆಯಲ್ಲಿ ಎರಡು ಬಾರಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಸಿದ ಸಭೆಗಳು ನಿರ್ಣಾಯಕ ಹಂತ ತಲುಪಿದ್ದು ಈ ಎಲ್ಲ ವಾದ-ವಿವಾದಗಳಿಗೆ ತೆರೆ ಬಿದ್ದಿದೆ. ಚಿತ್ರದುರ್ಗದಲ್ಲಿ ಜನವರಿ 29 ರಿಂದ ಫೆಬ್ರವರಿ 1 ರವರೆಗೆ ಸಾಹಿತ್ಯ ಸಮ್ಮೇಳನ ನಡೆಯುವುದು ಖಚಿತವಾಗಿ ಇದೀಗ ತ್ವರಿತ ಗತಿಯಲ್ಲಿ ಸಿದ್ಧತೆಗಳು ಆರಂಭವಾಗಿವೆ. ಇದಕ್ಕಾಗಿ ರಚಿತವಾಗಿರುವ ಸ್ವಾಗತಸಮಿತಿಯಲ್ಲಿ ನಮ್ಮನ್ನು ಮಹಾಪೋಷಕರೆಂದೂ, ನಮ್ಮ ಹೆಸರಿನವರೇ ಆದ ಚಿತ್ರದುರ್ಗ ಮಠದ ಶ್ರೀ ಶಿವಮೂರ್ತಿ ಶರಣರನ್ನು ಗೌರವಾಧ್ಯಕ್ಷರೆಂದೂ, ಜಿಲ್ಲೆಯ ಇನ್ನುಳಿದ 14 ಜನ ಮಠಾಧೀಶರನ್ನು ಪೋಷಕರೆಂದೂ ಆಯ್ಕೆ ಮಾಡಿರುವುದನ್ನು ನೋಡಿದರೆ ಈ ಸಮ್ಮೇಳನ ನಾಡಿನ ಭಕ್ತರಿಗೆ ಮಠಾಧಿಪತಿಗಳ ಸಮ್ಮೇಳನವಾಗಿ ಕಂಡರೆ ಆಶ್ಚರ್ಯವೇನಿಲ್ಲ!

ಸಮ್ಮೇಳನಕ್ಕೆ ಬರುವವರನ್ನು 'ಅತಿಥಿಗಳಂತೆ ನೋಡದೆ ನಂಟರಂತೆ ಕಾಣಬೇಕು' ಎಂಬ ಅಭಿಪ್ರಾಯ ಆರಂಭದ ಸಭೆಯೊಂದರಲ್ಲಿ ಬಂದಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಅಭಿಪ್ರಾಯವನ್ನು ಮಂಡಿಸಿದವರಿಗೆ ತೀ.ನಂ.ಶ್ರೀ ಅವರ 'ನಂಟರು' ಎಂಬ ಲೇಖನದ ಪರಿಚಯವಾಗಲೀ, ಮದುವೆ ಮಾಡಿದ ಅನುಭವವಾಗಲೀ ಇದ್ದಂತೆ ತೋರುವುದಿಲ್ಲ. ಒಮ್ಮೆ ಆತ್ಮೀಯ ಸ್ನೇಹಿತರಾಗಿದ್ದವರು ಪರಸ್ಪರ ಸಂಬಂಧ ಬೆಳೆಸಿದ ಮೇಲೆ ಹೇಗೆ ಅವರ ವರ್ತನೆಯಲ್ಲಿ ಬದಲಾವಣೆಯಾಗಿ ಸ್ನೇಹವಿಶ್ವಾಸಗಳಿಗೆ ಕುತ್ತು ಬರುತ್ತದೆ ಎಂಬುದನ್ನು ತೀ.ನಂ.ಶ್ರೀಯವರು ತಮ್ಮ ಪ್ರಬಂಧದಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಅವರ ಮಾತುಗಳಲ್ಲಿಯೇ ಹೇಳುವುದಾದರೆ "ನಿಮ್ಮ ಪ್ರಿಯಮಿತ್ರನನ್ನು ಹೆಣ್ಣು ಕೊಟ್ಟೋ ತಂದೋ ನಂಟನನ್ನು ಮಾತ್ರ ಮಾಡಿಕೊಳ್ಳಬೇಡಿ. ಆ ದಿನವೇ ನಿಮ್ಮಿಬ್ಬರ ಸ್ನೇಹಕ್ಕೆ ನೀವು ಎಳ್ಳುನೀರು ಬಿಟ್ಟ ಹಾಗೆ" ಎಂದು ಎಚ್ಚರಿಸುತ್ತಾರೆ. ಅದಕ್ಕೆ ಅವರು ಕೊಡುವ ಕಾರಣವೆಂದರೆ "ಸ್ನೇಹದ ತಳಹದಿ ಪ್ರೇಮ, ಋಜುತ್ವ. ಬಾಂಧವ್ಯದ ತಳಹದಿ ಗೌರವ, ಬಿಗುಮಾನ". ಆ ಮೊದಲು ನಿಮ್ಮ ಸ್ನೇಹಿತ ಮನೆಗೆ ಬಂದಾಗ ನೀವು ಲುಂಗಿಪಂಚೆ ಉಟ್ಟುಕೊಂಡಿದ್ದರೂ, ಮೈಮೇಲೆ ಸಾಧಾರಣ ಬನಿಯನ್ ಹಾಕಿಕೊಂಡಿದ್ದರೂ ನಡೆಯುತ್ತಿತ್ತು. ನಿಮ್ಮ ಮಡದಿ ಹಳೆ ಸೀರೆ ಉಟ್ಟುಕೊಂಡಿದ್ದರೂ ಅಭ್ಯಂತರವಿರಲಿಲ್ಲ. ಕುರ್ಚಿ ಕೊಡದಿದ್ದರೂ ಚಿಂತೆಯಿಲ್ಲ. ನಿಮ್ಮ ಸ್ನೇಹಿತನೇ ಕುರ್ಚಿ ಎಳೆದುಕೊಂಡು ಕುಳಿತುಕೊಳ್ಳುತ್ತಿದ್ದ. ಅವನೇ ಕೇಳಿ ಕಾಫಿ ಪಡೆಯುತ್ತಿದ್ದ. ಆದರೆ ಅದೇ ಸ್ನೇಹಿತ ಸಂಬಂಧ ಬೆಳೆಸಿದ ಮೇಲೆ ಹಾಗಾಗುವುದಿಲ್ಲ. ಕಾರಣ ಅವನು ಸ್ನೇಹಿತನಾಗಿ ಉಳಿದಿರುವುದಿಲ್ಲ. ಬೀಗನಾಗಿರುತ್ತಾನೆ. ಅವನ ಮುಖದ ಮೇಲೆ ಬಿಗುಮಾನ ಬೀಗತೊಡಗುತ್ತದೆ. ಬೀಗರು ಮನೆಗೆ ಬಂದಾಗ ನೀವು ಉಪೇಕ್ಷೆ ಮಾಡುವಂತಿಲ್ಲ. ಒಳ್ಳೆಯ ಅಂಗಿ ತೊಟ್ಟುಕೊಳ್ಳಲೇಬೇಕು. ನಿಮ್ಮ ಮಡದಿ ದಪ್ಪಂಚಿನ ಸೀರೆ ಉಟ್ಟುಕೊಂಡರೆ, ಶಾವಿಗೆ ಪಾಯಸ ಮಾಡಿದರೆ ಆ ದಿನ ಮನೆಗೆ ಬಂದವರು ಸ್ನೇಹಿತರಲ್ಲ ಬೀಗರು ಎಂದು ಪಕ್ಕದ ಮನೆಯವರಿಗೆ ಖಾತ್ರಿ. ಬೀಗರು ಬೀಗರ ಮಧ್ಯೆ ಬಿಗುಮಾನ ಇರುತ್ತದೆ. ಸ್ನೇಹಿತರ ಮಧ್ಯೆ ಇರುವುದಿಲ್ಲ. "ಸ್ನೇಹಿತನೊಂದಿಗೆ ಸರಸವಾಡುವಂತೆ ನಂಟನೊಂದಿಗೆ ಆಡಲಾದೀತೆ? ಯಾವ ಘಳಿಗೆಗೆ ನಗೆ ಹೋಗಿ ಹೊಗೆಯಾಗುವುದೋ ಎಂಬ ಭೀತಿ" ಎಂದು ತೀ.ನಂ.ಶ್ರೀ ಅತಂಕ ವ್ಯಕ್ತಪಡಿಸುತ್ತಾರೆ. 'ಅಕ್ಕಿ ಮೇಲಾಸೆ ನಂಟರ ಮೇಲೆ ಪ್ರೀತಿ' ಎಂಬ ಗಾದೆಮಾತೊಂದಿದೆ. ಆದರೆ ಆ ಪ್ರೀತಿಯ ಹಿಂದೆ ತೀ.ನಂ.ಶ್ರೀ ಹೇಳುವಂತೆ "ಯಾವಾಗಲೂ ಹೆದರಿಕೆ, ನಿಮ್ಮನ್ನು ಎಲ್ಲಿ ಆಡಿಕೊಳ್ಳುವರೋ" ಎಂಬ ಭಯ ಇದ್ದೇ ಇರುತ್ತದೆ.

ಸ್ನೇಹಿತರು ಬಂದಾಗ ಮನೆಯೊಳಗೆ ಅಲ್ಲಲ್ಲಿ ಬಿದ್ದ ಸಾಮಾನುಗಳು ಹಾಗೆಯೇ ಬಿದ್ದಿರುತ್ತವೆ. ಅವುಗಳ ಗೊಡವೆಗೆ ನೀವು ಹೋಗುವುದಿಲ್ಲ. ನಂಟರು ಬಂದಾಗ ಹಾಗಾಗುವುದಿಲ್ಲ. ಹಳೆಯ ಚಪ್ಪಲಿಗಳು, ಸವೆದ ಕಸಬರಿಕೆ ಬಾಗಿಲ ಮೂಲೆ ಸೇರುತ್ತವೆ. ಮನೆಯ ಯಜಮಾನರಾಗಿ ನೀವು ಎಲ್ಲ ರೀತಿಯ ಕಟ್ಟೆಚ್ಚರ ವಹಿಸಿ ಬೀಗರ ನಿರೀಕ್ಷೆಯಲ್ಲಿದ್ದರೆ, ಮನೆಯೊಳಗಿರುವ ರಾಗಿಮೂಟೆ/ಭತ್ತದ ಮೂಟೆಗಳು ಬೀಗರ ಮುಖನೋಡಲು ಬಯಸದೆ 'ದುಪ್ಪಡಿ'ಯನ್ನು ಹೊದ್ದುಕೊಂಡು ಸಪ್ಪಳ ಮಾಡದೆ ಬೆಚ್ಚಗೆ ಮಲಗಿರುತ್ತವೆ! ಮನೆಗೆ ಬೀಗರು ಬಂದಾಗ ನಮ್ಮ ರೈತರು ಏಕೆ ಹೀಗೆ ತಾವು ಬೆಳೆದ ದವಸ-ಧಾನ್ಯಗಳ ಚೀಲಗಳನ್ನು ಮುಚ್ಚಿಡುತ್ತಾರೋ ನಮಗಂತೂ ತಿಳಿಯದು. ಶಿಷ್ಯರ ಮನೆಗೆ

ನಾವು ಹೋದಾಗಲೂ ಕಾಣಬರುವುದು ಇದೇ ದೃಶ್ಯ. ಗುರುಗಳೇನು ನಿಮ್ಮ ಮನೆಯನ್ನು ಧಾಳಿ ಮಾಡಲು ಬಂದ ಲೋಕಾಯುಕ್ತರೇ? ಅಲ್ಲವಲ್ಲ. ಏಕೆ ಹೆದರಬೇಕು? ಅಷ್ಟಕ್ಕೂ ಮನೆಯೊಳಗೆ ನೀವು ಪೇರಿಸಿಟ್ಟ ತುಂಬಿದ ಚೀಲಗಳು ಯಾರದೋ ತಲೆಹೊಡೆದು ತಂದು ತುಂಬಿಟ್ಟ ನೋಟಿನ ಚೀಲಗಳಲ್ಲವಲ್ಲ! ಅವು ವರ್ಷದುದ್ದಕ್ಕೂ ನೀವು ಕಷ್ಟಪಟ್ಟು ಬೆವರು ಸುರಿಸಿ ದುಡಿದಿದ್ದರ ಪ್ರತಿಫಲವೇ ತಾನೆ. ಹೀಗಿರುವಾಗ ಅವುಗಳನ್ನು ನೀವು ಮುಚ್ಚಿಡುವ ಪ್ರಯತ್ನವನ್ನೇಕೆ ಮಾಡುತ್ತೀರಿ? ಗುರುಗಳು ಅವುಗಳನ್ನು ನೋಡಿ ಎಲ್ಲಿ ತಮ್ಮ ಮಠದ ದಾಸೋಹಕ್ಕೆ ಹೇರಿಸಿಕೊಂಡು ಹೋಗುತ್ತಾರೆಂಬ ಭಯವೇ? **"ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು. ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ"** ಎನ್ನುತ್ತಾರೆ ಬಸವಣ್ಣನವರು. ಗುರುಗಳು ಕೇಳಲಿ, ಬಿಡಲಿ. ನೀವು ದುಡಿದಿದ್ದರಲ್ಲಿ ಸ್ವಲ್ಪಭಾಗವನ್ನು ಸಮಾಜಕ್ಕೆ ನೀಡಲೇಬೇಕು. ಅದು ಧರ್ಮ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇಲ್ಲದಿದ್ದರೆ ಏನಾಗುತ್ತದೆಯೆಂದು ದೇವರದಾಸಿಮಯ್ಯನವರ ಈ ಕೆಳಗಿನ ವಚನದಲ್ಲಿ ನೋಡಿ:

> **ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ**
> **ಇರುಳೆಲ್ಲ ನಡೆದನಾ ಸುಂಕಕ್ಕಂಜಿ**
> **ಕಳವೆಯೆಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು**
> **ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥಾ!**

ಒಬ್ಬ ಹಳ್ಳಿಯ ರೈತ ತಾನು ಬೆಳೆದ ರಾಗಿಯನ್ನೋ, ಜೋಳವನ್ನೋ ಮಾರಲು ಪೇಟೆಯಲ್ಲಿರುವ ಮಾರುಕಟ್ಟೆಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಪೇಟೆಯನ್ನು ಪ್ರವೇಶಿಸುವಾಗ ಸಿಗುವ ಸುಂಕದ ಕಟ್ಟೆಯಲ್ಲಿ ಅನ್ಯಾಯವಾಗಿ ಸುಂಕ (tax) ಕೊಡಬೇಕಾಗುತ್ತದಲ್ಲಾ ಏನು ಮಾಡುವುದು ಎಂದು ಚಿಂತಿಸತೊಡಗಿದ. ಅವನಿಗೊಂದು ಉಪಾಯ ಹೊಳೆಯಿತು. ಸುಂಕದ ಕಟ್ಟೆಯ ಅಧಿಕಾರಿ ಮಧ್ಯರಾತ್ರಿ ಮಲಗಿದ್ದಾಗ ಗೊತ್ತಿಲ್ಲದಂತೆ ಗಾಡಿ ಹೊಡೆದರೆ ಸುಂಕ ಕೊಡುವುದು ಉಳಿಯುತ್ತದೆ ಎಂದು ಆಲೋಚಿಸಿದ. ಸರಿ, ರಾತ್ರಿ ಹೊತ್ತು ಕಣಜದಿಂದ ಧಾನ್ಯವನ್ನು ಇಳಿಸಿ ಅವಸರದಲ್ಲಿ ಚೀಲ ತುಂಬಿಕೊಂಡು ಕತ್ತಲಲ್ಲಿ ಯಾರಿಗೂ ಕಾಣಿಸದಂತೆ ಲಗುಬಗನೆ ಗಾಡಿ ಹೊಡೆದ. ಅವನ ಎಣಿಕೆಯಂತೆ ಸುಂಕದ ಕಟ್ಟೆಯ ಅಧಿಕಾರಿ ಮಲಗಿದ್ದ. ರೈತ ಸದ್ದಿಲ್ಲದೆ ಗಾಡಿ ಹೊಡೆದು ಮಾರುಕಟ್ಟೆ ಸೇರಿದ. ಅವನ ತಂತ್ರ ಫಲಿಸಿತು. ಆದರೆ ಬೆಳಗಾಗುತ್ತಲೇ ತುಂಬಿದ ಚೀಲಗಳನ್ನು ಗಾಡಿಯಿಂದ ಕೆಳಗಿಳಿಸಿಕೊಳ್ಳಲು ಹೋದರೆ ಅವನು ಕಂಡದ್ದೇನು? ಗಾಡಿಯಲ್ಲಿ ಬರೀ ಖಾಲಿ ಚೀಲಗಳು ಇದ್ದವು! ರೈತ ಹೌಹಾರಿದ. ಆದದ್ದೇನು? ಹಿಂದಿನ ರಾತ್ರಿ ಕತ್ತಲಲ್ಲಿ ಚೀಲ ತುಂಬುವಾಗ ಹರಿದ ಗೋಣಿಚೀಲಗಳಲ್ಲಿ ತುಂಬಿದ್ದು ಗಾಡಿ ಹೊಡೆಯುವಾಗ ದಾರಿಯುದ್ದಕ್ಕೂ ಕಾಳುಗಳು ಸೋರಿ ಹೋಗಿದ್ದವು. ಅವನ ಗಮನವೆಲ್ಲಾ ಸುಂಕದ ಕಟ್ಟೆಯ ಅಧಿಕಾರಿಯ ಮೇಲಿದ್ದು ತುಂಬಿದ ಚೀಲಗಳ ಮೇಲೆ ಇರಲಿಲ್ಲ! ಸುಂಕ ಉಳಿಸಲು ಹೋಗಿ ಇಡೀ ಗಂಟನ್ನೇ ಕಳೆದುಕೊಂಡಿದ್ದ! ಚೀಲ ತುಂಬಿದ್ದರೆ ಹೇಗೆ ವ್ಯವಹಾರದಲ್ಲಿ ಸುಂಕವನ್ನು ಕೊಡಬೇಕೋ ಹಾಗೆ ನಿಮ್ಮ ಹೃದಯ ಭಕ್ತಿಯಿಂದ ತುಂಬಿದ್ದರೆ ಜನತಾಜಂಗಮಕ್ಕೆ ಭಕ್ತಿಕಾಣಿಕೆಯನ್ನು ಕೊಡಲೇಬೇಕು.

ಅದು ಬೇರೆ ವಿಷಯ. ನಮ್ಮನ್ನು ಕೇಳಿದರೆ ನೀವು ಸಮಾಜಕ್ಕೆ ಕೊಡಿ ಬಿಡಿ, ನೀವು ಬೆವರು ಸುರಿಸಿ ದುಡಿದ ದವಸ-ಧಾನ್ಯಗಳಿಂದ ತುಂಬಿದ ಚೀಲಗಳನ್ನು ಮಾತ್ರ ಯಾರಿಗೂ ಕಾಣಿಸದಂತೆ ಎಂದೂ ಬಟ್ಟೆಹೊದಿಸಿ ಮುಚ್ಚಿಡಬೇಡಿ. ಕಾಯಕಜೀವಿಗಳಾದ ನೀವು ಈ ವರ್ಷ ಎಷ್ಟು ಬೆಳೆದಿದ್ದೀರೆಂದು ಗುರುಗಳಾದಿಯಾಗಿ ಎಲ್ಲರಿಗೂ ಗೊತ್ತಾಗಬೇಕು. ಮನೆಯಲ್ಲಿ ಜಗಳಮಾಡಿಕೊಂಡು ಜಮೀನನ್ನು ಬೀಳು ಬಿಟ್ಟು ಏನೂ ಬೆಳೆಯದ ನಿಮ್ಮ ತಮ್ಮನ ಮನೆಗೆ ಹೋದಾಗ ಅಲ್ಲಿರುವ ಖಾಲಿಚೀಲಗಳನ್ನು ನೋಡಿ ಗುರುಗಳು ಅವನನ್ನು 'ಬದುಕುಗೇಡಿ' ಎಂದು ಗದರಿಸುವಂತಾಗಬೇಕು. ಖಾಲಿ ಚೀಲಗಳನ್ನು ನೋಡಿದರೆ ತನ್ನ ಮರ್ಯಾದೆಗೆ ಎಲ್ಲಿ ಕುಂದು ಉಂಟಾಗುತ್ತದೆಯೋ ಎಂದು ಅವನು ಅಂಜಿ ಬೀಗರು ಬಂದಾಗ ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳುವ ಸಲುವಾಗಿ ಅವನು ಪಕ್ಕದ ಮನೆಯಿಂದ ಕಡ ತಂದಾದರೂ ತುಂಬಿದ ಚೀಲಗಳನ್ನು ಪೇರಿಸಿಡುವಂತಾಗಬೇಕು!

ಮದುವೆಗೆ ಬಂದ ಬೀಗರಿಗೆ ಊಟ ಹಾಕಿ ತೃಪ್ತಿಪಡಿಸಲು ಆ ದೇವರ ಕೈಯಿಂದಲೂ ಸಾಧ್ಯವಿಲ್ಲ. ಬಹಳ ವರ್ಷಗಳ ಹಿಂದೆ ದಾವಣಗೆರೆಯಲ್ಲಿ ರಾಜನಹಳ್ಳಿ ಹನುಮಂತಪ್ಪ ಎಂಬ ಆಗರ್ಭ ಶ್ರೀಮಂತರಿದ್ದರು. ಅವರು ಆಗಿನ ಮಹಾರಾಜರಿಂದ ಧರ್ಮಪ್ರವರ್ತ ಎಂದು ಬಿರುದಾಂಕಿತರಾಗಿದ್ದರು. ಅವರು ಸಾರ್ವಜನಿಕರ ಉಪಯೋಗಕ್ಕೆಂದು ಧರ್ಮಾರ್ಥ ಕಟ್ಟಿಸಿಕೊಟ್ಟ ಒಂದು ಕಲ್ಯಾಣಮಂಟಪವಿದೆ. ಅದರಲ್ಲಿ ತಮ್ಮ ಮಗಳ ಮದುವೆಯನ್ನು ಮಾಡುವ ಸಂದರ್ಭದಲ್ಲಿ ಬಂದ ಬೀಗರಿಗೆ ಷಡ್ರಸೋಪೇತ ಭಕ್ಷ್ಯಭೋಜ್ಯಗಳನ್ನು ಮಾಡಿಸಿದ್ದರಂತೆ. ಎಲ್ಲ ಬಗೆಯ ಅಡುಗೆಯನ್ನೂ, ತಿಂಡಿತಿನಸುಗಳನ್ನೂ ಹಸುವಿನ ತುಪ್ಪದಲ್ಲಿಯೇ ಮಾಡಿಸಿದ್ದರು. ಹೀಗಾಗಿ ಬೀಗರು ಊಟಕ್ಕೆ ಕುಳಿತಾಗ ಬಾಳೆ ಎಲೆಯಲ್ಲಿ ಎಲ್ಲಾ ಆಹಾರಪದಾರ್ಥಗಳನ್ನು ಬಡಿಸಿದ ಮೇಲೆ ಸಂಪ್ರದಾಯದ ಪ್ರಕಾರ ಕೊನೆಯಲ್ಲಿ ತುಪ್ಪ ಬಡಿಸಲಿಲ್ಲವಂತೆ. ಹೇಗೂ ಎಣ್ಣೆಯನ್ನು ಸ್ವಲ್ಪವೂ ಬಳಸದೆ ಎಲ್ಲ ಅಡುಗೆಯನ್ನು ಹಸುವಿನ ತುಪ್ಪದಲ್ಲಿಯೇ ಮಾಡಿಸಿದ್ದರಿಂದ ಮೇಲೆ ಸೌಟು ತುಪ್ಪಹಾಕಿಸುವುದು ಬೇಡವೆಂದು ಬಿಡಿಸಿದ್ದರಂತೆ. ಕಂಠಪೂರ್ತಿ ಉಂಡ ಬೀಗರು ತೇಗುತ್ತಾ ಜಿಡ್ಡುಗಟ್ಟಿದ ತಮ್ಮ ಕೈಗಳನ್ನು ತೊಳೆದುಕೊಳ್ಳುವಾಗ ಮುಖಸಿಂಡರಿಸಿಕೊಂಡು ಮಾತನಾಡಿದರಂತೆ: "ಇವನ ಶ್ರೀಮಂತಿಕೆಗೆ ಬೆಂಕಿ ಹಾಕ, ಮಗಳ ಮದುವೆಯಲ್ಲಿ ಇವನ ಯೋಗ್ಯತೆಗೆ ಒಂದು ಸೌಟು ತುಪ್ಪ ಹಾಕಿಸಲಿಲ್ಲ!" ಒಬ್ಬ ಅನಾಮಧೇಯ ಕವಿ ಸಂಸ್ಕೃತದಲ್ಲಿ ಮದುವೆ ಮನೆಯನ್ನು ಕುರಿತು ಒಂದು ಸುಂದರವಾದ ಕವಿತೆಯನ್ನು ಬರೆದಿದ್ದಾನೆ.

> **ಕನ್ಯಾ ವರಯತೇ ರೂಪಂ ಮಾತಾ ವಿತ್ತಂ ಪಿತಾ ಶ್ರುತಂ ।**
> **ಬಾಂಧವಾಃ ಕುಲಮಿಚ್ಛಂತಿ ಮೃಷ್ಟಾನ್ನಮಿತರೇ ಜನಾಃ ॥**

ಅಂದರೆ ಮದುವೆಮಂಟಪದಲ್ಲಿ ಹಸೆಮಣೆಯ ಮೇಲೆ ಕುಳಿತ ನವವಧುವು ತನ್ನ ಗಂಡ ಒಳ್ಳೆಯ ರೂಪವಂತನಾಗಿರಬೇಕೆಂದು ಬಯಸುತ್ತಾಳಂತೆ. ವಧುವಿನ ತಾಯಿ ತನ್ನ ಮಗಳ ಕೈಹಿಡಿಯುವ ಅಳಿಯ ಬಹಳ ದುಡ್ಡಿದ್ದವನಾಗಿರಬೇಕೆಂದು ಬಯಸುತ್ತಾಳೆ. ಕಾರಣ ತನ್ನ ಅಳಿಯ ಶ್ರೀಮಂತನಾಗಿದ್ದರೆ ಮನೆಯಲ್ಲಿ ಆಳುಕಾಳು ಇದ್ದು ತನ್ನ ಮಗಳಿಗೆ ಹೆಚ್ಚಿನ ಕೆಲಸವಿಲ್ಲದೆ ಗಂಡನ ಮನೆಯಲ್ಲಿ ಸುಖವಾಗಿರುತ್ತಾಳೆಂಬುದು ತಾಯಿಕರುಳಿನ ಲೆಕ್ಕಾಚಾರ. ವಧುವಿನ ತಂದೆ ತನ್ನ ಅಳಿಯ ಹೆಚ್ಚು ಓದಿದವನಾಗಿರಬೇಕು ಎಂದು ಬಯಸುತ್ತಾನೆ. ತನ್ನ ಅಳಿಯ ಸಾಫ್ಟ್‌ವೇರ್ ಇಂಜಿನಿಯರೋ, ಡಾಕ್ಟರೋ ಆದರೆ ಸಮಾಜದಲ್ಲಿ ತನಗೆ ಒಂದು ಒಳ್ಳೆಯ ಗೌರವಸ್ಥಾನ ಸಿಗುತ್ತದೆ ಎಂಬ ಎಣಿಕೆ ಅವನದು. ವಧೂ-ವರರ ಬಂಧುಬಾಂಧವರು ಒಳ್ಳೆಯ ಮನೆತನದ ಹೆಣ್ಣು, ಒಳ್ಳೆಯ ಮನೆತನದ ಗಂಡು ಆಗಬೇಕೆಂದು ಬಯಸುತ್ತಾರೆ. ಇನ್ನು ಮದುವೆಗೆ ಬಂದ ಉಳಿದ ಜನರು ಮದುವೆ ಮನೆಯಲ್ಲಿ ಸಿಗುವ ಮೃಷ್ಟಾನ್ನ ಭೋಜನವನ್ನು

ಕತ್ತರಿಸಲು ಬಂದಿರುತ್ತಾರೆ ಎನ್ನುತ್ತದೆ ಈ ಸುಭಾಷಿತ. ಮದುವೆ ಮನೆಗೆ ಊಟ ಮಾಡಲು ಬರುವ ಬಂಧುಬಾಂಧವರಲ್ಲದ ಈ ಜನ ಯಾರಿರಬಹುದು ಎಂದು ನಿಮಗೆ ಜಿಜ್ಞಾಸೆಯೇ? ದೊಡ್ಡ ದೊಡ್ಡ ಪೇಟೆ ಪಟ್ಟಣಗಳಲ್ಲಿರುವ ಕಲ್ಯಾಣ ಮಂಟಪಗಳಲ್ಲಿ ನಡೆಯುವ ಮದುವೆಗಳಿಗೆ ಹೋದಾಗ ನೀವು ಕೇಳಿ ಗೊತ್ತಾಗುತ್ತದೆ. ಅವರನ್ನು ಗಂಡಿನ ಕಡೆಯವರಿರಬಹುದೆಂದು ಹೆಣ್ಣಿನ ಕಡೆಯವರು ತಿಳಿದುಕೊಂಡರೆ, ಹೆಣ್ಣಿನ ಕಡೆಯವರಿರಬಹುದೆಂದು ಗಂಡಿನ ಕಡೆಯವರು ತಿಳಿದುಕೊಳ್ಳುತ್ತಾರೆ. ಯಾರೆಂದು ವಿಚಾರಿಸಿದರೆ ಎಲ್ಲಿ ಬೀಗರು ಸಿಟ್ಟಾಗಿ ಮದುವೆಯೇ ನಿಂತುಹೋಗುತ್ತದೆಯೋ ಎಂಬ ಭೀತಿ ಹೆಣ್ಣಿನ ಕಡೆಯವರಿಗೆ. ಇವರಿಬ್ಬರ ಕಣ್ಣಿಗೆ ಮಣ್ಣೆರಚುವ ಅವರು ವಾಸ್ತವವಾಗಿ ಯಾರ ಕಡೆಯವರೂ ಆಗಿರದೆ ರಸ್ತೆಯ ಕಡೆಯವರಾಗಿರುತ್ತಾರೆ (road-siders)! ಕಲ್ಯಾಣಮಂಟಪಗಳು ಇಲ್ಲದ ಕಾಲದಲ್ಲಿ ಈ ಸಂಸ್ಕೃತಸುಭಾಷಿತಕಾರ ಇದನ್ನು ಊಹಿಸಿ ಹೇಗೆ ಬರೆದನೆಂಬುದು ನಮಗೆ ಯಕ್ಷಪ್ರಶ್ನೆಯಾಗಿದೆ.

ಮದುವೆ ಮನೆಯಲ್ಲಿ ಮದುಮಕ್ಕಳಿಗೆ ನಂಟರಿಷ್ಟರು ಪ್ರೀತಿಯಿಂದ ಕೊಡುವ ಉಡುಗೊರೆಗೆ ಹಳ್ಳಿಗಳಲ್ಲಿ 'ಮುಯ್ಯಿ' ಎಂದು ಕರೆಯುತ್ತಾರೆ. ಅದು ಇತ್ತೀಚೆಗೆ ಪ್ರೀತಿಯ ಉಡುಗೊರೆಯಾಗಿ ಉಳಿಯದೆ ಅವರು ತಮ್ಮ ಮಕ್ಕಳ ಮದುವೆ ವಯಸ್ಸಿನವರೆಗೆ ಕೊಟ್ಟ ಅಲ್ಪಾವಧಿ ಅಥವಾ ದೀರ್ಘಾವಧಿ ಸಾಲದ ಪಟ್ಟಿಯಾಗಿ ಪರಿಣಮಿಸಿದೆ. ಇಂತಹ 'ಸಾಲದ ಪಟ್ಟಿ'ಗಳನ್ನು ಚಿಕ್ಕಹುಡುಗರಾಗಿ ಮದುಮಕ್ಕಳ ಹಿಂದೆ ಕುಳಿತು ಬರೆದ 'ಬಿಕ್ಕಲಂದಾರ'ರ ಅನುಭವ ನಮಗಿದೆ. ಅದು ಕ್ರಮೇಣ 'ಮುಯ್ಯಿಗೆ ಮುಯ್ಯಿ' ಎಂದು ಸೇಡಿನ ಮನೋಧರ್ಮಕ್ಕೆ ತಿರುಗಿ ಕಲಹಕ್ಕೆ ಕಾರಣವಾಗಿದೆ. ಕೆಲವು ಮದುವೆ ಆಹ್ವಾನಪತ್ರಿಕೆಗಳಂತೂ ಇದರ ಉಸಾಬರಿಯೇ ಬೇಡವೆಂದು 'ಮುಯ್ಯನ್ನು ಸ್ವೀಕರಿಸಲಾಗುವುದಿಲ್ಲ' ಎಂದು ದಪ್ಪಕ್ಷರಗಳಲ್ಲಿ ಮುದ್ರಿತಗೊಂಡು ನಂಟರಿಗೆ ಕೊಟ್ಟ ನೋಟೀಸಿನಂತಿರುತ್ತವೆ!

ಆದಕಾರಣ ಇಲ್ಲಿಗೆ ಸರಿಯಾಗಿ ಒಂದು ತಿಂಗಳಿಗೆ ಚಿತ್ರದುರ್ಗದ ಸಾಹಿತ್ಯ ಸಮ್ಮೇಳನಕ್ಕೆ ಬರುವವರನ್ನು ಕನ್ನಡಾಭಿಮಾನಿಗಳು ಬೀಗರಂತೆ ನೋಡದೆ ಸ್ನೇಹಿತರಂತೆ ನೋಡುವುದು ಒಳ್ಳೆಯದು. ಬರುವ ಪ್ರತಿನಿಧಿಗಳೂ ಸಹ ಸ್ನೇಹಿತರಂತೆ ಬಂದರೆ ಇನ್ನೂ ಒಳ್ಳೆಯದು. ನಂಟರಾಗಿ ಬರುವುದು ಸುತರಾಂ ಸರಿಯಲ್ಲ. ಅಪರೂಪದ ಅತಿಥಿಗಳಂತೆ ಬಂದರೆ ತಪ್ಪೇನೂ ಇಲ್ಲ. ಎಷ್ಟೇ ಆಗಲಿ 'ಅತಿಥಿದೇವೋ ಭವ' ಎಂದು ಅತಿಥಿ ಸತ್ಕಾರಕ್ಕೆ ಹೆಸರಾದ ನಾಡಲ್ಲವೇ ಇದು! (ಸ್ವಗತ) ಸದ್ಯ ಆತಿಥ್ಯಮಾಡುವವರ 'ತಿಥಿ' ಮಾತ್ರ ಆಗದಿರಲಿ!

17.12.2008

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑